# ‘ವಿಲನ್ ಪಾತ್ರ ನಿರಾಸೆ ಮೂಡಿಸಿತ್ತು

## ವರ್ಷಿಕಾ ಉದಯದ ‘ಜನನಿ’ಯ ನಾಯಕಿ

■ ರಾಘವೇಂದ್ರ ಕೆ.

◆ **ಜನನಿ ಪಾತ್ರದ ಬಗ್ಗೆ ಹೇಳಿ.**

ಇದು ‘ಅಪ್ಪನ ಮಗಳು’ ಹೇಗಿರಬೇಕು ಎನ್ನುವುದನ್ನು ತೋರಿಸುತ್ತದೆ. ಇದರಲ್ಲಿ ಅಪ್ಪ ತುಂಬ ಶಿಸ್ತಿನ ವ್ಯಕ್ತಿ. ಆತ ತನ್ನ ಮಗಳನ್ನು ತುಂಬ ನಾಜೂಕಾಗಿ ಬೆಳೆಸಿರುತ್ತಾರೆ. ಅಂತಹ ಹೆಣ್ಣುಮಕ್ಕಳು ಹೇಗೆ ಇರ್ತಾರೆ, ಸಮಾಜ ಜೊತೆ ಹೇಗೆ ವರ್ತಿಸುತ್ತಾರೆ ಎನ್ನುವುದನ್ನು ಈ ಪಾತ್ರದ ಮೂಲಕ ತೋರಿಸಿದ್ದಾರೆ.

◆ **ಟೀವಿಯಲ್ಲಿ ಆಸಕ್ತಿ ಮೂಡಿದ್ದು ಹೇಗೆ?**

ನಮ್ಮ ತಾತ ರಂಗಭೂಮಿ ಕಲಾವಿದ. ಅವರಿಗೆ ತಮ್ಮ ಮಗಳನ್ನು ಕಲಾವಿದೆ ಮಾಡುವ ಆಸೆ ಇತ್ತು. ನನ್ನ ತಾಯಿಗೆ ಅದರ ಆಸಕ್ತಿ ಮೂಡಲಿಲ್ಲ. ನಾನಾದರೂ ಆಗಬೇಕು ಎನ್ನುವುದು ಅವರ ಕನಸಾಗಿತ್ತು. ಅವರ ಕೊನೆಯ ದಿನಗಳಲ್ಲಿ ಅವರಿಗೋಸ್ಕರ ನಾನು ಕಿರುತೆರೆಗೆ ಬಂದೆ. ಅವರ ಆಶೀರ್ವಾದದ ಕಾರಣದಿಂದಲೇ ಇಲ್ಲಿ ಮುಂದುವರಿದಿದ್ದೇನೆ ಎಂದು ಭಾವಿಸುತ್ತೇನೆ. ನನಗೆ ಅನ್ನ ಕೊಡುತ್ತಿರುವುದೇ ಕಿರುತೆರೆ.

◆ **ಕಲಾವಿದೆಯಾಗಿ ಆರಂಭದಲ್ಲಿ ಹೇಗಿತ್ತು?**

ಆಗ ನನಗೆ ಸ್ಪಷ್ಟವಾಗಿ ಕನ್ನಡ ಗೊತ್ತಿರಲಿಲ್ಲ. ಹಾಗಾಗಿ ತುಂಬ ಕಷ್ಟ ಆಗ್ತಾ ಇತ್ತು. ಮೊದಲು ಕಲರ್ಸ್ ಸೂಪರ್‌ನಲ್ಲಿ ‘ಇವಳೇ ವೀಣಾ ಪಾಣಿ’ಯಲ್ಲಿ ಭಕ್ತಿ ಪ್ರಧಾನ ಪಾತ್ರ ಸಿಕ್ಕಿತ್ತು. ನನ್ನ ಕಲಾ ಜೀವನಕ್ಕೆ ಭೂಮಿಕೆ ಹಾಕಿದ್ದು ಅದೇ. ಅದರಲ್ಲಿ ಸ್ಪಷ್ಟವಾಗಿ ಕನ್ನಡ ಮಾತನಾಡಬೇಕಿತ್ತು. ಅದು ದೊಡ್ಡ ಸವಾಲನ್ನು ನನಗೆ ಕೊಟ್ಟಿತ್ತು. ನಿರ್ದೇಶಕ ಆದರ್ಶ ಹೆಗಡೆ ನನಗೆ ಅಕ್ಷರಗಳ ಸ್ಪಷ್ಟನೆಯನ್ನು ಹೇಳಿಕೊಟ್ಟರು. ಅದಾದ ಮೇಲೆ ನಾನು ಕನ್ನಡವನ್ನು ಸರಿಯಾಗಿ ಕಲಿತೆ.

◆ **ಸಾಮಾಜಿಕ ಅಥವಾ ಪೌರಾಣಿಕ ಕಥೆಗಳಲ್ಲಿ ನಿಮಗೆ ಯಾವುದು ಇಷ್ಟ?**

ನನಗೆ ಪುರಾಣ ಕಥೆಗಳೇ ಇಷ್ಟ. ಸಾಮಾಜಿಕ ಕಥೆಗಳಿಗಿಂತ, ಪೌರಾಣಿಕ ಕಥೆಗಳಲ್ಲಿ ಅಭಿನಯಕ್ಕೆ ಸವಾಲುಗಳು ಹೆಚ್ಚಿರುತ್ತವೆ. ಅಲ್ಲಿ ಇನ್ನೂ ಕಲಿಯಬಹುದು ಎನ್ನುವ ಉದ್ದೇಶ ನನ್ನದು. ಪೌರಾಣಿಕವಾಗಿ ಹೇಳುವಂತಹ ಪಾತ್ರ ನನಗೆ ಇನ್ನೂ ಸಿಕ್ಕಿಲ್ಲ. ಮಹತ್ವದ ಪಾತ್ರವನ್ನು ನಿರ್ವಹಿಸಬೇಕು ಎನ್ನುವ ಆಸೆ ಮಾತ್ರ ಇದೆ. ಸದ್ಯ ನನಗೆ ನಿರ್ದೇಶನದಲ್ಲಾಗಲಿ ಅಥವಾ ತಾಂತ್ರಿಕವಾಗಿ ಕೆಲಸ ಮಾಡುವ ಆಸೆ ಇಲ್ಲ. ಒಂದು ಪಕ್ಷ ಹಾಗೇನಾದರೂ ಮಾಡುವ ಸಂದರ್ಭ ಬಂದರೆ ಪುರಾಣದ ಕಥೆಯನ್ನೇ ರೂಪಿಸುತ್ತೇನೆ. ಅಷ್ಟು ಸಾಮರ್ಥ್ಯ ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಸದ್ಯ ನನ್ನ ಮನೋಸ್ಥಿತಿ ಅಭಿನಯಕ್ಕೆ ಸೀಮಿತವಾಗಿದೆ. ಒಟ್ಟಾರೆ ಪುರಾಣ ಕಥೆಗಳು ನನಗೆ ತುಂಬ ಇಷ್ಟ.

◆ **ಧಾರಾವಾಹಿಯಲ್ಲಿ ಗೋಳು ಹೊಯ್ಕೊಳ್ತೀರಿ ಎಂದು ಕೇಳಿದರೆ ಏನು ಹೇಳ್ತೀರಿ?**

ತುಂಬ ಅಂದರೆ ತುಂಬ ಜನ ಹೇಳಿದ್ದಾರೆ. ಬರೀ ಅದು ನಮ್ಮ ಪಾತ್ರ ಅಷ್ಟೇ. ಅದು ವೈಯಕ್ತಿಕವಾಗಿ ನಮ್ಮ ನಿಲುವು ಅಲ್ಲ. ಕಥೆ ಬಯಸುತ್ತದೆ, ಅದನ್ನು ನಿರ್ದೇಶಕರು ನಿಯಂತ್ರಿಸುತ್ತಾರೆ ಎಂದು ಸಮರ್ಥನೆಯನ್ನು ನೀಡುತ್ತೇನೆ. ಒಮ್ಮೆ ತಮಿಳು ಧಾರಾವಾಹಿ ಒಂದರಲ್ಲಿ ವಿಲನ್ ಪಾತ್ರ ಮಾಡಿದ್ದೆ. ಆ ಪಾತ್ರದ ಕ್ರೌರ್ಯವನ್ನು ಸಹಿಸಿಕೊಳ್ಳದೆ ಒಬ್ಬ ಅಜ್ಜಿ ನಾನು ಭೇಟಿಯಾದ ಸಂದರ್ಭದಲ್ಲಿ ‘ನೀನು ಹಾಳಾಗಿ ಹೋಗಬೇಕು’ ಎಂದು ಶಾಪ ಹಾಕಿದ್ದರು. ಏಕೆ ಇಷ್ಟು ಕೆಟ್ಟದಾಗಿ ಮಾಡ್ತೀಯಾ ಎಂದು ಪ್ರಶ್ನಿಸಿದ್ದರು. ಅವರ ಶಾಪಾಶಯ ಕೇಳಿದಾಗ ನಿಜಕ್ಕೂ ನನ್ನಲ್ಲಿ ನಿರಾಸೆ ಆಗಿತ್ತು. ಅದೊಂದೇ ನೆಗೆಟಿವ್ ಪಾತ್ರ ಮಾಡಿದ್ದು, ಉಳಿದಂತೆ ನಾನು ನಾಯಕಿ ಪಾತ್ರವನ್ನೇ ಮಾಡಿದ್ದು.

◆ **ಸಿನಿಮಾಗಳಿಗೆ ಅವಕಾಶ ಬಂದರೂ ಏಕೆ ಒಪ್ಪಿಕೊಂಡಿಲ್ಲ?**

ನನಗೆ ಆರು ವರ್ಷದಿಂದ ಪುರುಸೊತ್ತು ಇಲ್ಲ. ಧಾರಾವಾಹಿಯಲ್ಲಿಯೇ ಅಷ್ಟು ಬಿಜಿಯಾಗಿದ್ದೇನೆ. ಇಲ್ಲಿಯ ವಾತಾವರಣಕ್ಕೆ ನಾನು ಅಡಿಕ್ಟ್ ಆಗಿದ್ದೇನೆ. ತಿಂಗಳಲ್ಲಿ 20 ದಿನ ಚಿತ್ರೀಕರಣಕ್ಕೇ ಆಗುತ್ತಿದೆ. ಕನಿಷ್ಠ 10 ದಿನವಾದರೂ ನನಗೆ ಬ್ರೇಕ್ ಬೇಕು ಎಂದು ಅನಿಸುತ್ತದೆ. ಹಾಗಾಗಿ ಬೇರೆ ಕಡೆ ಗಮನ ಕೊಡಲಿಲ್ಲ. ಹಾಗೆ ಸಾಕಷ್ಟು ಅವಕಾಶಗಳು ಬಂದಿವೆ. ಮತ್ತೊಂದು ಸಂಗತಿ ಏನೆಂದರೆ, ನನಗೆ ನಾಯಕನ ತಂಗಿ ಪಾತ್ರ ಮಾಡುವ ಆಸೆ ಇದೆ. ಒಮ್ಮಿಂದೊಮ್ಮೆಲೆ ಸಿನಿಮಾದಲ್ಲಿ ನಾಯಕಿ ಪಾತ್ರ ಮಾಡಬೇಕು ಎಂದು ಅನಿಸಿಲ್ಲ. ಹಾಗಾಗಿ ಅದು ಅಷ್ಟು ಆಸಕ್ತಿ ಬಂದಿಲ್ಲ.

◆ **ಪಾತ್ರದೊಂದಿಗೆ ಹೊಂದಾಣಿಕೆಯನ್ನು ಹೇಗೆ ಮಾಡಿಕೊಳ್ಳುತ್ತೀರಿ?**

‘ಇವಳೇ ವೀಣಾ ಪಾಣಿ’ಯ ಪಾತ್ರಕ್ಕೂ ನನಗೂ ತುಂಬ ವಿರೋಧ ವ್ಯಕ್ತಿತ್ವ ಇತ್ತು. ಆ ಪಾತ್ರ ನಿರ್ವಹಿಸುವ ತನಕ ನನಗೆ ಭಕ್ತಿ ಎನ್ನುವುದೇ ಗೊತ್ತಿರಲಿಲ್ಲ. ವೈಯಕ್ತಿಕವಾಗಿ ತುಂಬ ಮಾತನಾಡುತ್ತೇನೆ. ತುಂಬ ಸೌಮ್ಯ ಸ್ವಭಾವದ ದೇವರ ಬಗ್ಗೆ ಅಪಾರ ನಂಬಿಕೆ ಇರುವ, ದೇವರೇ ಎಲ್ಲಾ ಎನ್ನುವ ಉದಾತ್ತ ಗುಣಧರ್ಮದ ಪಾತ್ರ. ವೈಯಕ್ತಿಕವಾಗಿ ಅದು ನನಗೆ ತುಂಬ ಸಹಾಯವನ್ನು ಮಾಡಿದೆ. ವೃತ್ತಿ ಜೀವನ ಆರಂಭಕ್ಕೆ ಭದ್ರ ಬುನಾದಿಯನ್ನು ಅದು ಹಾಕಿತು. ಮಾತ್ರವಲ್ಲ, ಹೇಗೆ ಇರಬೇಕು ಎನ್ನುವ ಪಾಠವನ್ನೂ ಕಲಿಸಿತು. ಜನನಿ ಕೂಡ ಅಷ್ಟೇ ನಮ್ಮ ಅಪ್ಪ ಪಾತ್ರದಂತೆ ಇಲ್ಲ. ಹೀಗೆ ವೈಯಕ್ತಿಕ ವೈರುಧ್ಯಗಳ ನಡುವೆ ಮತ್ತೊಂದು ವ್ಯಕ್ತಿತ್ವವನ್ನು ಪರಿಚಯಿಸಲು ಪಾತ್ರದೊಂದಿಗೆ ಹೊಂದಾಣಿಕೆ ಅಗತ್ಯ.

